ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 278
ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 09-12-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) 2019ನೇ ವರ್ಷದಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಆಗಿರುವ ಹಾನಿಯ ನಷ್ಟದ ಅಂದಾಜು ಮೊತ್ತವೆಷ್ಟು;</td><td>2019ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಪ್ರವಾಹ ಮತ್ತು ಭೂಕುಸಿತದಿಂದಾಗಿ ಒಟ್ಟು ಅಂದಾಜು ರೂ.645.19 ಕೋಟಿ ನಷ್ಟವಾಗಿರುತ್ತದೆ.</td></tr>
<tr><td>(ಆ) 2019ನೇ ಸಾಲಿನಲ್ಲಿ ಮಳೆಹಾನಿ ಪರಿಹಾರವಾಗಿ ಜಿಲ್ಲೆಗೆ ಸರ್ಕಾರ ಘೋಷಣೆ ಮಾಡಿದ ಪರಿಹಾರದ ಮೊತ್ತವೆಷ್ಟು;

(ಇ) ಈ ರೀತಿ ಘೋಷಣೆಯಾದ ಅನುದಾನದಲ್ಲಿ ಇದುವರೆಗೂ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು;</td><td>ಪ್ರವಾಹ ಪರಿಹಾರಕ್ಕಾಗಿ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿದೆ:
<table>
<tr><th>ಕ್ರ. ಸಂ</th><th>ಹಾನಿ ವಿವರ</th><th>ಪರಿಹಾರ ಬಿಡುಗಡೆ/ಪಾವತಿಸಿದ ಪ್ರಕರಣ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಮಾನವ ಹಾನಿ</td><td>126.00</td></tr>
<tr><td>2</td><td>ಜಾನುವಾರು ಹಾನಿ</td><td>11.38</td></tr>
<tr><td>3</td><td>ದಿನ ನಿತ್ಯದ ಗೃಹಪಯೋಗಿ ವಸ್ತುಗಳು ಹಾನಿ</td><td>414.80</td></tr>
<tr><td>4</td><td>ಗುಡಿಸಲು ಹಾನಿ</td><td>1.23</td></tr>
<tr><td>5</td><td>ಜಾನುವಾರು ಕೊಟ್ಟಿಗೆ ಹಾನಿ</td><td>1.41</td></tr>
<tr><td>6</td><td>ಮನೆ ಹಾನಿ</td><td>4083.00</td></tr>
<tr><td>7</td><td>ಬೆಳೆ ಹಾನಿ</td><td>10197.00</td></tr>
<tr><td>8</td><td>ಮೂಲಭೂತ ಸೌಕರ್ಯ ಹಾನಿ (ಎಸ್.ಡಿ.ಆರ್.ಎಫ್)</td><td>1000.00</td></tr>
<tr><td>9</td><td>ಮೂಲಭೂತ ಸೌಕರ್ಯ ಹಾನಿ (ವಿಶೇಷ)</td><td>10000.00</td></tr>
<tr><td></td><td>ಒಟ್ಟು</td><td>25834.82</td></tr>
</table></td></tr>
<tr><td>(ಈ) ಜಿಲ್ಲೆಯಲ್ಲಿ 2019ರಲ್ಲಿ ಮಳೆಹಾನಿ ಪರಿಹಾರವಾಗಿ ಇದುವರೆಗೂ ಎಷ್ಟು ಮನೆಗಳನ್ನು ನಿರ್ಮಾಣ ಮಾಡಿ ಸಂತ್ರಸ್ಥರಿಗೆ ಹಸ್ತಾಂತರಿಸಲಾಗಿದೆ;

(ಉ) 2019ರ ಮಳೆಹಾನಿಯ ಎಲ್ಲಾ ಸಂತ್ರಸ್ಥರಿಗೆ ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆಯೇ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು?</td><td>ಸರ್ಕಾರದಿಂದ 2019ರ ಮಳೆಹಾನಿಯ ಎಲ್ಲಾ ಸಂತ್ರಸ್ಥರಿಗೆ ಮನೆಗಳನ್ನು ನಿರ್ಮಾಣ ಮಾಡುವುದಿಲ್ಲ. ಬದಲಾಗಿ ನೆರೆಸಂತ್ರಸ್ಥರು ಖುದ್ದಾಗಿ ಮನೆ ನಿರ್ಮಾಣ/ದುರಸ್ಥಿ ಮಾಡಿಸಿಕೊಳ್ಳಲು ಪರಿಷ್ಕೃತ ಮಾರ್ಗಸೂಚಿಯನ್ವಯ ನೆರೆ ಸಂತ್ರಸ್ಥರಿಗೆ ಪರಿಹಾರ ಮೊತ್ತವನ್ನು ಪಾವತಿಸಲಾಗುತ್ತದೆ.

ಮನೆ ಕಳೆದುಕೊಂಡ ಎ ಮತ್ತು ಬಿ ವರ್ಗದ ಸಂತ್ರಸ್ಥರಿಗೆ ಹಂತ ಹಂತವಾಗಿ ಮನೆಯನ್ನು ನಿರ್ಮಾಣ ಮಾಡುವ ಪ್ರಗತಿಯನುಸಾರ ಪರಿಹಾರ ವಿತರಿಸಲಾಗುತ್ತದೆ. 'ಸಿ' ವರ್ಗದ ಮನೆಗಳ ಸಂತ್ರಸ್ಥರಿಗೆ ಈಗಾಗಲೇ ಪರಿಹಾರವನ್ನು ಪೂರ್ಣವಾಗಿ ಪಾವತಿಸಲಾಗಿದೆ. ಈ ವರೆವಿಗೂ ಎಲ್ಲಾ ಬಗೆಯ ಮನೆ ಹಾನಿಗೆ ರೂ.16.96ಕೋಟಿಗಳನ್ನು ಪಾವತಿಸಲಾಗಿದೆ. ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಜಿಲ್ಲೆಯಲ್ಲಿ ಒಟ್ಟಾರೆ 2046 ಮನೆಹಾನಿಯಾಗಿದ್ದು ಈ ಪೈಕಿ 'ಸಿ' ವರ್ಗದ 1541ಮನೆ ಹಾನಿ ಸಂತ್ರಸ್ಥರಿಗೆ ಪ್ರತಿ ಮನೆಗೆ ರೂ.50,000ದಂತೆ ಪೂರ್ಣ ಪರಿಹಾರ ಪಾವತಿಸಲಾಗಿದೆ. ಇನ್ನುಳಿದಂತೆ 'ಎ' ಮತ್ತು 'ಬಿ' ವರ್ಗದ 277 ಮನೆ ನಿರ್ಮಾಣ ಪ್ರಾರಂಭವಾಗಿದೆ.</td></tr>
</table>

ಕಂಇ 612 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 278ಕ್ಕೆ ಅನುಬಂಧ

ವರ್ಗ	ಒಟ್ಟು ಮನೆ	ತಳಪಾಯ ಹಂತ	ಗೋಡೆ	ಛಾವಣಿ	ಪೂರ್ಣ	ಬಿಡುಗಡೆಯಾದ ಅನುದಾನ (ರೂ.ಕೋಟಿಗಳಲ್ಲಿ)
'ಎ'	217	76	50	30	6	4.89
'ಬಿ' (ಪುನರ್ ನಿರ್ಮಾಣ)	125	47	15	3	2	2.16
'ಬಿ1' (ದುರಸ್ತಿ)	163	39	9	-	-	2.20
'ಸಿ'	1541	1541 ಮನೆ ಹಾನಿಯಾದ ಸಂತ್ರಸ್ತರಿಗೆ ತಲಾ ರೂ.50,000/-ದಂತೆ ಅನುದಾನ ಪಾವತಿಸಲಾಗಿದೆ.				7.71
ಒಟ್ಟು	**2046**	**162**	**74**	**33**	**8**	**16.96**